# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 373 |
| ಸದಸ್ಯರ ಹೆಸರು | : | ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 29.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೇಲೂರು ತಾಲ್ಲೂಕು ರಣಘಟ್ಟ ಪಿಕಪ್ ನಿಂದ ಹಳೇಬೀಡು, ದ್ವಾರಸಮುದ್ರ ಹಾಗೂ ಬೆಳವಾಡಿ ದೊಡ್ಡಕೆರೆ ಸೇರಿದಂತೆ ವಿವಿಧ ಕೆರೆಗಳನ್ನು ತುಂಬಿಸುವ ಯೋಜನೆ ಆರಂಭಗೊಂಡಿದ್ದು ಯಾವಾಗ; ಯಾವಾಗ ಪೂರ್ಣಗೊಳ್ಳಬೇಕಿತ್ತು; | ಬೇಲೂರು ತಾಲ್ಲೂಕು, ರಣಘಟ್ಟ ಪಿಕಪ್ ನಿಂದ ಹಳೇಬೀಡು, ದ್ವಾರಸಮುದ್ರ ಹಾಗೂ ಬೆಳವಾಡಿ ದೊಡ್ಡಕೆರೆ ಸೇರಿದಂತೆ ವಿವಿಧ ಕೆರೆಗಳನ್ನು ತುಂಬಿಸುವ ಯೋಜನೆಗೆ 30.07.2021 ರಂದು ಕಾರ್ಯಾದೇಶ ನೀಡಲಾಗಿದ್ದು, ಗುತ್ತಿಗೆ ಕರಾರಿನ್ವಯ ದಿನಾಂಕ:10.08.2023 ರೊಳಗೆ ಪೂರ್ಣಗೊಳಿಸಬೇಕಿತ್ತು. |
| ಆ) | ಕಾಮಗಾರಿ ಯಾವ ಹಂತದಲ್ಲಿದೆ; ಎಷ್ಟು ಕಾಮಗಾರಿ ಬಾಕಿ ಇದೆ; ಕಾಮಗಾರಿಗೆ ಈವರೆಗೆ ಆಗಿರುವ ವೆಚ್ಚ ಎಷ್ಟು; (ಮಾಹಿತಿ ನೀಡುವುದು); | ಈ ಕಾಮಗಾರಿಯ ಪ್ರಗತಿಯ ವಿವರಗಳು ಕೆಳಗಿನಂತಿವೆ:<br>ಈ ಯೋಜನೆಯಲ್ಲಿ ಗುರುತ್ವ ಕಾಲುವೆಯನ್ನು ಕಿ.ಮೀ 0.00 ಯಿಂದ ಕಿ.ಮೀ 3.420 ಹಾಗೂ ಕಿ.ಮೀ 8.580 ಯಿಂದ ಕಿ.ಮೀ 9.262ವರೆಗೆ (ಒಟ್ಟು 4.102 ಕಿ.ಮೀ ಉದ್ದ) ಮತ್ತು 3.00 ಮೀ ವ್ಯಾಸದ ಸುರಂಗ ಮಾರ್ಗವನ್ನು ಕಿ.ಮೀ 3.420 ನಿಂದ ಕಿ.ಮೀ 8.530 ವರೆಗೆ (ಒಟ್ಟು 5.160 ಕಿ.ಮೀ ಉದ್ದ), ಒಟ್ಟಾರೆ 9.262 ಕಿ.ಮೀ ಉದ್ದ ಹಾಗೂ 9 ಅಡ್ಡಮೋರಿಗಳನ್ನು ನಿರ್ಮಿಸಬೇಕಾಗಿರುತ್ತದೆ.<br>○ ಕಾಮಗಾರಿಯ ಭೌತಿಕ ಪ್ರಗತಿಯ ಪ್ರಸ್ತುತ ಹಂತ:<br>○ **ತೆರೆದ ಗುರುತ್ವ ನಾಲೆ (From Ch: 0.00 Km to 3.420 Km) ಹಾಗೂ ತೆರೆದ ಗುರುತ್ವ ನಾಲೆ (From Ch: 8.58 Km to 9.262 Km):** ಗುರುತ್ವ ಕಾಲುವೆಯ ಒಟ್ಟು 4102.00 ಮೀ ಉದ್ದದ ಪೈಕಿ 474.00 ಮೀ ಉದ್ದದ ತೆರೆದ ನಾಲೆಯ ಕಾಮಗಾರಿ ಹಾಗೂ 2 ಸಿ.ಟಿ.ಸಿ/ಎಸ್.ಪಿ ಅಡ್ಡಮೋರಿಗಳ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಉಳಿದಂತೆ 3628.00 ಮೀ ಉದ್ದದ ತೆರೆದ ನಾಲೆ ನಿರ್ಮಾಣದ ಕೆಲಸ ಹಾಗೂ 7 ಸಿ.ಟಿ.ಸಿ/ಎಸ್.ಪಿಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>○ **ಗುರುತ್ವ ಸುರಂಗ (From Ch: 3.42 Km to 8.58 Km):** ಸುರಂಗ ಮಾರ್ಗದ ನಿರ್ಮಾಣವನ್ನು 4 ಹಂತದಲ್ಲಿ ನಿರ್ವಹಿಸುತ್ತಿದ್ದು, ಒಟ್ಟು 5160.00 ಮೀ ಉದ್ದದ ಪೈಕಿ ಪ್ರಸ್ತುತ ಹಂತ 1 ರಲ್ಲಿ 1496.00 ಮೀ, ಹಂತ 2 ರಲ್ಲಿ 534.00 ಮೀ, ಹಂತ 3 ರಲ್ಲಿ 927.00 ಮೀ ಹಾಗೂ ಹಂತ 4 ರಲ್ಲಿ 1814.00 ಮೀ ಸೇರಿ ಒಟ್ಟು 4771 ಮೀ ಉದ್ದದ ಸುರಂಗದ ಮಣ್ಣು ಅಗೆತದ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದಂತೆ 392.00ಮೀ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>○ 1839.20 ಮೀ ನ ಸುರಂಗ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದಂತೆ 3320.80 ಮೀ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | ಈ ಯೋಜನೆಯಡಿ ಇಲ್ಲಿಯವರೆಗೂ ರೂ.55.88 ಕೋಟಿ ವೆಚ್ಚವಾಗಿರುತ್ತದೆ. |
| ಇ) | ಕಾಮಗಾರಿ ಬಹಳ ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಿಧಾನಗತಿ ಕಾಮಗಾರಿಗೆ ಕಾರಣಗಳೇನು; | ಹೌದು. ಈ ಕೆಳಕಂಡ ಕಾರಣಗಳಿಂದ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿರುತ್ತದೆ.<br><br>1. ಟನಲ್ ವ್ಯಾಸ ಚಿಕ್ಕದಾಗಿರುವ ಕಾರಣ (3 ಮೀ) ಮಣ್ಣು ಅಗೆಯಲು ಸಣ್ಣ ಉಪಕರಣಗಳನ್ನು ಉಪಯೋಗಿಸುತ್ತಿದ್ದು ಮತ್ತು ಅಗೆದ ಮಣ್ಣನ್ನು ಸಾಗಿಸಲು ಹೆಚ್ಚು ಸಮಯ ಬೇಕಾಗಿರುವುದರಿಂದ ಹಾಗೂ ನಿರ್ಬಂಧಿತ ಸ್ಥಳ ಇರುವುದರಿಂದ ಡ್ರಿಲ್ಲಿಂಗ್ ಸಾಮಗ್ರಿಗಳನ್ನು ಅಳವಡಿಸಿ ಒಂದು ಬ್ಲಾಸ್ಟಿಂಗ್‌ನಿಂದ ಹೆಚ್ಚು ಮಣ್ಣಿನ ಅಗೆತವನ್ನು ಮಾಡಲು ಸಾಧ್ಯವಾಗಿಲ್ಲದ ಕಾರಣ;<br><br>2. ಸುರಂಗ ಮಾರ್ಗದ ಇನ್ ಟೇಕ್ ಪೋರ್ಟಲ್ ಸ್ಥಳದಲ್ಲಿ ಮಣ್ಣು ಅಗೆತದ ಕೆಲಸ ಕಾಲುವೆಯ ತಳಮಟ್ಟದವರೆಗೆ ನಿರ್ವಹಿಸಿದ್ದರೂ, ಯಾವುದೇ ಗಟ್ಟಿಕಲ್ಲಿನ ಪದರಗಳು ಇರುವುದು ಕಂಡುಬಂದಿಲ್ಲದ ಕಾರಣ ಸೂಕ್ತವಾದ ಸಪೋರ್ಟಿಂಗ್ ಸಿಸ್ಟಂ ಅಳವಡಿಸಿಕೊಂಡು ಫಾಲ್ಸ್ ಪೋರ್ಟಲ್ ನಿರ್ಮಾಣ ಮಾಡಬೇಕಾಗಿರುವುದರಿಂದ;<br><br>3. ಸರಪಳಿ 3553 ಮೀ ನಲ್ಲಿ ಟನಲ್ ಮೇಲ್ಭಾಗದಲ್ಲಿ ನೀರು ಸೋರುವಿಕೆ ಇದ್ದ ಕಾರಣ ಕ್ಯಾವಿಟಿ ಉಂಟಾಗಿರುತ್ತದೆ. ಸರಪಳಿ 5220 ಮೀ ನಲ್ಲಿ 50 ಮೀ ಉದ್ದಕ್ಕೂ ನೀರಿನ ಪದರ ಸುರಂಗ ಮಾರ್ಗದಲ್ಲಿ ಸಿಕ್ಕಿದ್ದು ಸುರಂಗದ ಒಳ ಭಾಗದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದರಿಂದ ನೀರನ್ನು ಪಂಪುಗಳ ಮೂಲಕ ಮೇಲೆತ್ತಿ ಸುರಂಗದಿಂದ ಹೊರಕ್ಕೆ ಬಿಡಬೇಕಾಗಿದ್ದರಿಂದ;<br><br>4. ಒಟ್ಟು 58 ಎಕರೆ 18 ಗುಂಟೆ ಪ್ರದೇಶವು ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯಪತ್ರದ ಅಧಿಸೂಚನೆ ದಿನಾಂಕ:12.10.2023 ಹಾಗೂ ದಿನಾಂಕ: 18.12.2023ರಲ್ಲಿ 11(1) ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಮುಂದುವರೆದು ಜೆ.ಸೂರಾಪುರ, ಯಲಹಂಕ, ಕಲ್ಲುಶೆಟ್ಟಿಹಳ್ಳಿ, ರಾಮಚಂದ್ರಪುರ ಮತ್ತು ವೀರಾಪುರ ಗ್ರಾಮಗಳ ಜೆ.ಎಂ.ಸಿ ಯನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಬೇಲೂರು ಕಛೇರಿಯಿಂದ ದಿನಾಂಕ:6.8.2025 ರಂದು ವಿಶೇಷ ಭೂಸ್ವಾಧೀನಾಧಿಕಾರಿಗಳು, ಹಾಸನ ರವರ ಕಛೇರಿಗೆ ಸಲ್ಲಿಸಲಾಗಿದ್ದು, ಉಳಿದ ನೆಟ್ಟೇಕೆರೆ, ಚಿಲ್ಕೂರು, ಸಿ.ಹೊಸಹಳ್ಳಿ ಗ್ರಾಮಗಳ ಜೆ.ಎಂ.ಸಿ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>5. ಅನುಮೋದನೆಗೊಂಡ ತೆರೆದ ನಾಲೆಯ ಪಥವು ಖಾಸಗಿ ಜಮೀನುಗಳ ಮೂಲಕ ಕೆರೆಯನ್ನು ಬಳಸುತ್ತ, ಹೊಯ್ಸಳ ನಾಲಾ ಪಂಕ್ತಿಗೆ ಸೇರುತ್ತದೆ. |

| | | |
|---|---|---|
| | | ಸದರಿ ಖಾಸಗಿ ಜಮೀನಿನ ಮಾಲೀಕರು 19(1) ಪ್ರಸ್ತಾವನೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಸ್ಥಳವನ್ನು ಹಸ್ತಾಂತರಿಸದಿರುವ ಕಾರಣ;<br><br>6. ರಣಘಟ್ಟ ಹೊಡ್ಡಿನಿಂದ ದ್ವಾರ ಸಮುದ್ರ ಕೆರೆಗೆ ನೀರನ್ನು ಹರಿಸಲು ಹೊಯ್ಸಳರ ಕಾಲದಲ್ಲಿ ನಾಲೆಯನ್ನು ನಿರ್ಮಿಸಿದ್ದು ಅದರ ಕುರುವುಗಳನ್ನು ರಣಘಟ್ಟ ಹೊಡ್ಡಿನಿಂದ ಅಂದಲೆ ಗ್ರಾಮದವರೆಗೂ ಸರ್ಕಾರದ ದಿಶಾಂಕ್ ಅಪ್ಲಿಕೇಶನ್ ನಲ್ಲಿ ನಾಲಾ ಜಾಗವೆಂದು ಗುರುತಿಸಿರುತ್ತಾರೆ. ಆದರೆ ಸ್ಥಳದಲ್ಲಿ ರೈತರು ಆ ಜಾಗಕ್ಕೆ ಸಂಬಂಧಪಟ್ಟ ಪಹಣಿ, ಸರ್ವೆ ಸ್ಕೆಚ್, ಇತರೆ ದಾಖಲೆಗಳನ್ನು ತೋರಿಸಿ ನಾಲಾ ಜಾಗವನ್ನು ಖಾಸಗಿ ಜಾಗವೆಂದು ಸ್ಥಳದಲ್ಲಿ ಕಾಮಗಾರಿ ನಡೆಸಲು ಅಡ್ಡಿ ಪಡಿಸುತ್ತಿರುತ್ತಾರೆ. ಸ್ಥಳಕ್ಕೆ ತಾಲ್ಲೂಕು ಸರ್ವೆಯರ್‌ರನ್ನು ಕರೆದುಕೊಂಡು ಹೋಗಿ ಸರ್ಕಾರಿ ಜಾಗವನ್ನು ಗುರುತಿಸಿದರೂ ಸಹಾ ಕಾಮಗಾರಿಯನ್ನು ಮುಂದುವರೆಸಲು ಅಡ್ಡಿಪಡಿಸುತ್ತಿರುವುದರಿಂದ ; |
| ಈ) | ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? | ಸದರಿ ಯೋಜನೆಗೆ ದಿನಾಂಕ: 10.10.2027 ರವರೆಗೆ ಕಾಲಾವಧಿ ವಿಸ್ತರಣೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ನೀಡಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. |

ಸಂ: ಜಸಂಇ 11 ಎನ್‌ಎಲ್‌ಎ 2026

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿ**